ಆಶ್ಚರ್ಯವೂ ಕೋಪವೂ ಉಂಟಾಯಿತು. ನಾಲ್ಕು ಚಂದದ ಸಾಲುಗಳನ್ನು ಬರೆದು ಅದಕ್ಕೆ ಬಹುಮಾನವೇನಾದರೂ ಬಂದರೆ ಅದರಿಂದ ತನಗೆ ತಾಳಿಭಾಗ್ಯ ಬಂದೀತು ಎನ್ನುವ ಆಸೆ ಅವಳಿಗೆ! ತಾನು ಈಗ ಕವಿಯಲ್ಲವೆಂದೂ ತನ್ನಲ್ಲಿಯ ಕಾವ್ಯಶಕ್ತಿ ತನ್ನನ್ನು ತ್ಯಜಿಸಿರುವಳೆಂದೂ ನೆಪ ಹೇಳುವನು. ಬೇಕಾದರೆ ನೀನೇ ಕೇಳು ಎಂದು ಕರ್ಕಶ ಸಾಲುಗಳನ್ನು ಪ್ರಸ್ತುತಪಡಿಸಿ ತಾನೀಗ ಕವಿಯಾಗುಳಿದಿಲ್ಲ ಎಂದು ಅವಳಿಗೆ ಮನವರಿಕೆ ಮಾಡಲು ಪ್ರಯತ್ನಿಸುವನು. ಮಗಧ ರಾಜ್ಯದಿಂದ ಉಜ್ಜಯಿನಿಗೆ ಹೊಸದಾಗಿ ಬಂದಾಗ ಮಧುರಮತಿಯು ಆಡುವ ಸಾಮಾನ್ಯ ಮಾತೂ ಕಾವ್ಯದ ಕುಡಿಗಳಂತೆ ಅನಿಸುತ್ತಿದ್ದರಿಂದ ಅಕ್ಕಪಕ್ಕದ ಜನರೆಲ್ಲ ಕುಂಬಾರ ಯಾನೆ ಮಧುರಮತಿಯ ಮಾತು ಕೇಳಲು ನಿಲ್ಲುತ್ತಿದ್ದರು. ಹೀಗೆ ತಾನು ಜನಪ್ರಿಯನಾಗಿ ಕವಿಯೆಂದು ಗೊತ್ತಾದರೆ ಅನಾಹುತವೇ ಆದೀತು ಎಂಬುದನ್ನು ಅರಿತ ಮಧುರಮತಿಯು ತನ್ನ ನಾಲಿಗೆಯನ್ನು ಅಡ್ಡತಿಡ್ಡ ತಿರುಗಿಸಿ ಆದಷ್ಟೂ ಕಠೋರ ಮಾಡಿಕೊಳ್ಳಲು ಪ್ರಯತ್ನಿಸಿದ್ದನು. ಆದಷ್ಟೂ ಒರಟಾಗಿ ಮಾತಾಡುವನು. ನಡುರಾತ್ರಿ ಮಡದಿಯೂ ಊರವರೂ ಮಲಗಿದ ಮೇಲೆ ಸರಸ್ವತಿ ಮಾತೆಯ ಕ್ಷಮೆ ಕೋರಿ ಕಾವ್ಯ ರಚನೆಯಲ್ಲಿ ತೊಡಗಿಕೊಳ್ಳುವನು. ಹಾಗೆ ರಚಿಸಿದ ಕಾವ್ಯವನ್ನು ಯಾರಿಗೂ ತಿಳಿಯದ ರೀತಿಯಲ್ಲಿ ಮಹಾರಾಜನು ನೇಮಿಸಿದ ಗುಪ್ತಚರರ ಮೂಲಕ ಅರಮನೆಗೆ ತಲುಪಿಸುವನು. ಇಂಥ ಬಂಧನದಲ್ಲಿಯ ಕಾವ್ಯರಚನೆಯಿಂದ ಅವನ ಮನಸ್ಸು ಅರಳುತ್ತಿರಲಿಲ್ಲ. ತನ್ನ ಕಾವ್ಯಸಂವೇದನೆ ಜಿಡ್ಡುಗಟ್ಟುತ್ತಿದೆ ಎಂದು ಅವನಿಗೆ ಅನಿಸುತ್ತಿತ್ತು. ಮಹಾಕವಿ ನವಿಲೇಂದು ಭೂಷಣರನ್ನು ಕಣ್ಣಾರೆ ಕಾಣುವ ಅವರೊಡನೆ ಕಾವ್ಯಾನುಸಂಧಾನದಲ್ಲಿ ಪಾಲ್ಗೊಳ್ಳುವ ಆಸೆಯಿದ್ದರೂ ಹೋಗಲೋ ಬೇಡವೋ ಹೊಯ್ದಾಟದಲ್ಲಿ ನಿದ್ದೆ ಹೋಗಿ ಬೆಳಗ್ಗೆ ಎದ್ದವನಿಗೆ ಪತ್ನಿ ಗುಡಿಸಲಲ್ಲಿ ಕಾಣಲಿಲ್ಲ. ಗಾಬರಿಯಿಂದ ಎಲ್ಲಾ ಕಡೆ ಹುಡುಕಾಡಿದರೂ ಅವಳ ಸುಳಿವು ಸಿಗಲಿಲ್ಲ!

★★★

ಹೀಗಿರಲು ಕಾವ್ಯವಾಚನ ಕಾರ್ಯಕ್ರಮಕ್ಕೆ ಜನಸ್ತೋಮವೇ ಹರಿದು ಬಂತು. ಸಮ್ಮೇಳನದ ಮುಖ್ಯ ಆಕರ್ಷಣೆಯಾದ ನವಿಲೇಂದು ಭೂಷಣರ ಕಾವ್ಯವಾಚನ ಪ್ರಾರಂಭವಾಯಿತು. ಆರಾಧ್ಯದೇವತೆಯನ್ನೂ ಮಹಾರಾಜನನ್ನೂ ಕಾವ್ಯಮಯವಾಗಿ ವಂದಿಸಿ ವಿಜಯೇಶವೈಭವ ಎಂಬ ಮಹಾಕಾವ್ಯದ ಕೆಲವು ಚರಣಗಳನ್ನು ಮಂಡಿಸಿದನು. ಸಾಮಾನ್ಯರೂ ತಮ್ಮ ಕಾವ್ಯರಚನೆಯನ್ನು ಮುಂಚಿತವಾಗಿ ಸಲ್ಲಿಸಿ ಆಯ್ಕೆಯಾದವುಗಳನ್ನು ನವಿಲೇಂದುಭೂಷಣ ಮಹಾಕವಿಗಳು ವಾಚನಗೈಯುವ ವ್ಯವಸ್ಥೆ ಮಾಡಲಾಗಿತ್ತು. ಬದುಕು ಬವಣೆಯನ್ನೆಲ್ಲ ಮರೆತು ಚಂದ್ರ ತಾರೆ ನಕ್ಷತ್ರಗಳ ಮೇಲೆ, ಪ್ರೇಮ ಕಾಮದ ಮೇಲೆ, ನಾರಿಯರ ಮನಸ್ಸಿನ ಕೋಟೆಯ ಮೇಲೆ ಮೆರದಾಡುವ ಸಕಲಕಲಾ ವಲ್ಲಭ ಮಹಾರಾಜನ ಮೇಲೆ, ಕಾವ್ಯದ ಹೊಳೆ ಹರಿಯಿತು. ಆಹ್! ವ್ಹಾ! ಭಳಿರೇ! ಭೇಷ್! ಚಪ್ಪಾಳೆ! ಬಹುಮಾನಗಳು! ಆಮೇಲೆ ತಾನು ಉಜ್ಜಯಿನಿಗೆ ಕಾಲಿಟ್ಟ ಮೇಲೆ ತನ್ನಲ್ಲಿ ಸೃಜಿಸಿದ ಕಾವ್ಯಧಾರೆ ಬಗ್ಗೆ ಮಾತನಾಡುತ್ತಾ ಕೆಲವು ಸಾಲುಗಳನ್ನು ವಾಚಿಸುವಾಗ ಅದರ ಮುಂದಿನ ಸಾಲುಗಳನ್ನು ನೆರೆದ ಜನತೆಯ ನಡುವಿನಿಂದ ಯಾರೋ ಗುನುಗಿದರು. ಮಹಾರಾಜನಿಗೆ ನವಿಲೇಂದು ಮಹಾಕವಿ ವಾಚಿಸುತ್ತಿದ್ದ ಸಾಲುಗಳನ್ನು ಎಲ್ಲೋ ಕೇಳಿದಂತಿದೆ ಅನಿಸಿತು. ನವಿಲೇಂದುಭೂಷಣನು ಇನ್ನೊಂದು ಕಾವ್ಯಸಾಲನ್ನು ಭಾವಾಭಿನಯದಿಂದ ಪ್ರಸ್ತುತಪಡಿಸುತ್ತಿರುವಂತೆಯೇ ನೆರೆದ ಜನರ ಇನ್ನೊಂದು ಕಡೆಯಿಂದ ಮುಂದಿನ ಪಂಕ್ತಿಗಳ ಪುನರುಕ್ತಿ ಕೇಳಿಬಂತು. ಮಹಾರಾಜನಿಗೆ ಅವು ತಾನು ಕಿರಿಯ ರಾಣಿಗೆ